***Equation of Pay Scales as recommended by Pai Commission**

180 SRI V. V. PATTAR (Jamkhandi).—Will the Minister for Finance and Tourism be pleased to state :—

(a) whether it is a fact that Tahsildars and Assistant Director of Land Records were of the same grade in Bombay Karnataka area before Tukol Commission ;

(b) whether it is a fact that Tukol Commission had recommended separate pay scales for Tahsildars and Assistant Director of Land Records and Pai Commission recommended to rectify the error ;

(c) whether the Government would re-consider the same and do justice to the Assistant Director of Land Records by rectifying the anomaly ?

SRI M. VEERAPPA MOILY (Minister for Finance and Tourism)

(a) Yes.

(b) The two Pay Commissions had suggested a common scale of pay to these posts.

(c) After considering the nature of duties and responsibilities devolving on both the posts and all other aspects of the matter a lower scale of pay was sanctioned to the post of Assistant Director of Land Records. Government consider that there is no anomaly in the scale of pay assigned.

CALLING ATTENTION TO MATTERS OF URGENT PUBLIC IMPORTANCE

(*i*) *Re: Admission of students to Engineering and Technical Courses.*

SRI S. R. BOMMAI.—Sir, I call the attention of the Minister for Education about the hardship caused to the students, parents and private managements for having not announced the policy regarding the admission to Engineering and Technical Courses.

SRI G. B. SHANKAR RAO (Minister for Education).—Mr. Speaker, Sir, I wish to make the following statement.

The policy of the Government in regard to admission to engineering colleges was made clear last year. In accordance with this policy, the Government decided to abolish the system of levy of capitation fee in a phased manner. Government has also taken a decision to reserve 50 per cent of the seats for the students passing

from the institutions coming under the jurisdiction of the University concerned. The Order No. ED 168 TGL 80 dated 5-9-1981 embodying the above principles was issued in September, 1981

This order was challenged in the Hon'ble High Court of Karnataka by the aided and unaided engineering institutions. An order staying the operation of the Government Order has been granted by the High Court. The Advocate General has been requested to move the High Court for vacation of the stay order.

ಶ್ರೀ ಎಸ್.ಆರ್. ಬೊಮ್ಮಾಯಿ.—ಈಗ ಇಂಜಿನಿಯರಿಂಗ್ ಕಾಲೇಜುಗಳ ಬಗ್ಗೆ ಮತ್ತು ಟೆಕ್ನಿಕಲ್ ಇನ್ಸ್‌ಟಿಟ್ಯೂಷನ್‌ಗಳ ಸೀಟ್‌ಗಳ ಬಗ್ಗೆ ಸರ್ಕಾರದ ನೀತಿ ಏನು ಎಂಬುದನ್ನು ಮಾನ್ಯ ಮಂತ್ರಿಯವರು ಹೇಳಿದರು. ಈ ರಾಜ್ಯದಲ್ಲಿ ೧೯೭೮-೭೯ರಲ್ಲಿ ೨೦ ಕಾಲೇಜುಗಳು ಇದ್ದವು. ಇವುಗಳಲ್ಲಿ ೩೧೦೮ ಸ್ಥಾನಗಳಿದ್ದವು. ೧೯೭೯-೮೦ರಲ್ಲಿ ನಮ್ಮ ರಾಜ್ಯದಲ್ಲಿ ೨೯ ಕಾಲೇಜುಗಳಿದ್ದವು ಸೀಟ್‌ಗಳ ಸಂಖ್ಯೆ ೭೦೬೩ಕ್ಕೆ ಹೆಚ್ಚಾಯಿತು.

ಸುಮಾರು ೩ ಸಾವಿರ ಸೀಟ್ಸ್ ಹೆಚ್ಚಾಯಿತು. ೧೯೮೦-೮೧ಕ್ಕೆ ೮೪೪೬ ಕ್ಕೆ ಹೆಚ್ಚಿಸಿದ್ದೀರಿ, ಒಟ್ಟು ೪೧ ಕಾಲೇಜುಗಳಾಗಿವೆ. ಈಗ ಮಣಿಪಾಲದ್ದು ಒಂದು ಕಾಲೇಜು ಆಗಿದೆ. ಈಗ ಲಿಸ್ಟ್‌ನಲ್ಲಿ ನೀವು ಕೊಟ್ಟಿರುವುದು ೩೯ ಕಾಲೇಜುಗಳದ್ದು. ನಾನು ಈ ವಿಚಾರದಲ್ಲಿ ಹೋದಸಲ ಅನೇಕ ಬಾರಿ ಹೇಳಿದ್ದೇನೆ. ಹೋದಸಲ ಅಡ್ಮಿಷನ್ಸ್ ಬಗ್ಗೆ ಬೇಗ ಪ್ರಕಟಣೆ ಮಾಡಿ ಅಂತ ಹೇಳಿದೆ, ತಾವು ಮಾಡುತ್ತೇವೆ ಅಂತ ಹೇಳಿ ಹೇಳಿ ಕೊನೆಗೆ ಸೆಪ್ಟೆಂಬರ್‌ನಲ್ಲಿ ಮಾಡಿದಿರಿ. ಅಷ್ಟರಲ್ಲಿ ಈ ಕಾಲೇಜುಗಳಲ್ಲಿ ವಿದ್ಯಾರ್ಥಿಗಳನ್ನು ಅಡ್ಮಿಟ್ ಮಾಡಿಬಿಟ್ಟಿದ್ದರು. ಈಗ ನೀವು ಇವರ ಬಗ್ಗೆ ಸರ್ಕುಲರ್ ಅನ್ನು ಹೊರಡಿಸಿದ ಮೇಲೆ ಹೈಕೋರ್ಟಿಗೆ ಹೋಗಿ ಅವರು ತಡೆ ತಂದಿದ್ದಾರೆ. ಈ ತಡೆ ಆಜ್ಞೆ ಬಂದು ಸುಮಾರು ೮ ತಿಂಗಳಾಯಿತು. ಈ ತಡೆ ಆಜ್ಞೆ ಬಂದ ಮೇಲೆ ನಿಮ್ಮ ಅಡ್ವೋಕೇಟ್ ಜನರಲ್‌ರವರು ಯಾವ ದಿವಸ ಹಾಜರಾಗಿದ್ದರು? ಅವರು ಕೌಂಟರ್ ಅಫಿಡವಿಟ್‌ಗೆ ಏನು ಪ್ರಯತ್ನ ಮಾಡಿದ್ದಾರೆ ಮತ್ತು ಹೈಕೋರ್ಟ್‌ನಲ್ಲಿ ಸ್ಟೇ ವೆಕೇಟ್ ಮಾಡುವುದಕ್ಕೆ ಏನು ಪ್ರಯತ್ನ ಮಾಡಿದ್ದಾರೆ ಈ ವರ್ಷ ಅಕಾಡಮಿಕ್ ಇಯರ್ ಪ್ರಾರಂಭವಾಗುವುದರೊಳಗೆ ಇದರ ಬಗ್ಗೆ ಏನಾದರೂ ಅರ್ಜಿ ಹಾಕಿದರೆ? ಒಂದು ವೇಳೆ ಅರ್ಜಿ ಹಾಕಿದ್ದರೆ ಅದನ್ನು ವಿಚಾರಣೆ ತೆಗೆದುಕೊಳ್ಳುವುದಕ್ಕೆ ಅವರು ಏತಕ್ಕೆ ಪ್ರಯತ್ನ ಮಾಡಲಿಲ್ಲ ಇವೆಲ್ಲಕ್ಕೂ ತಾವು ಸ್ಪಷ್ಟ ಅಭಿಪ್ರಾಯ ಕೊಡಬೇಕು. ಇಲ್ಲದೇ ಹೋದರೆ ನಾವು ಹೇಳಬೇಕಾಗುತ್ತದೆ ತಾವು ಅಂದರೆ ಸರ್ಕಾರದವರು ಆ ಮ್ಯಾನೇಜ್‌ಮೆಂಟ್ ಜೊತೆಗೆ ಷಾಮೀಲಾಗಿದ್ದಾರೆ ಅಂತ ಅಲ್ಲದೆ ಇದನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ನೀವೇ ಕಾರಣರು ಅಂತಲೂ ಹೇಳಬೇಕಾಗುತ್ತದೆ ಈ ಪ್ರೈವೇಟ್ ಕಾಲೇಜುಗಳಲ್ಲಿ ಆ ವಿದ್ಯಾರ್ಥಿಗಳನ್ನು ಅಡ್ಮಿಷನ್ ಮಾಡಿಕೊಳ್ಳಬೇಕಾದರೆ ಮೆರಿಟ್ ಪೂಲ್‌ಗೆ ಇಷ್ಟು ರಿಸರ್ವೇಷನ್ ಪೂಲ್‌ಗೆ ಇಷ್ಟು, ಪೆಡ್ಯೂಲ್ಡ್ ಕ್ಯಾಸ್ಟ್, ಪೆಡ್ಯೂಲ್ಡ್ ಟ್ರೈಬ್ಸ್, ಮತ್ತು ಬ್ಯಾಕ್‌ವರ್ಡ್‌ಕ್ಲಾಸ್‌ಗೆ ಇಷ್ಟು ಅಂತ ಇರಬೇಕು ಅನ್ನುವುದು ಸರ್ಕಾರದ ಒಂದು ನೀತಿ ಏನು ಇದೆ. ಈ ಒಂದು ನೀತಿಯನ್ನು ಜಾರಿಗೆ ತರಲಿಕ್ಕೆ ಬಹುಶ: ಸರ್ಕಾರಕ್ಕೆ ಇಷ್ಟ ಇರಲಿಲ್ಲ ಅಂತ ಕಾಣುತ್ತದೆ, ಸಾರ್ವಜನಿಕರ ಅಭಿಪ್ರಾಯದ ಮೇರೆಗೆ ಅವರ ಒಂದು ಬತ್ತಾಯಿಕ್ಕೆ ತಂದಿದ್ದೀರಿ ಅಂತ ಕಾಣುತ್ತದೆ. ನಾನು ಹೋದಸಲವೇ ಹೇಳಿದೆ. ಹೈಕೋರ್ಟ್‌ನಲ್ಲಿರುವ ಸ್ಟೇ ಅನ್ನು ಈ ವರ್ಷ ಪ್ರಾರಂಭವಾಗುವುದರೊಳಗಾದರೂ ಕೂಡ ಅದನ್ನು ಹಿಂತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡಿ ಎಂದು, ಅದಕ್ಕೆ ತಾವೇನಾದರೂ ಪ್ರಯತ್ನ ಮಾಡಿದ್ದೀರ?

ಶ್ರೀ ಜಿ.ಬಿ. ಶಂಕರರಾವ್.— ಮಾನ್ಯ ಎಸ್.ಆರ್. ಬೊಮ್ಮಾಯಿಯವರು ಈ ತಡೆ ಆಜ್ಞೆಯನ್ನು ಹೈಕೋರ್ಟ್‌ನಿಂದ ತರಿಸಲಿಕ್ಕೆ ನೀವೇ ಸಹಾಯ ಮಾಡಿದಿರಿ ಅನ್ನುವುದನ್ನು ಹೇಳಿದರು. ತಮಗೆ ಗೊತ್ತಿರಬಹುದು, ಅಲ್ಲಿ ಎಂತೆಂತಹ ಬುದ್ಧಿವಂತರು ಇದ್ದಾರೆ. ಅವರೇನೂ ಸಾಮಾನ್ಯ ಜನರಲ್ಲ ಅನ್ನುವುದು ಅವರಿಗೂ ಸಹ ಅಡ್ವೋಕೇಟ್ ಜನರಲ್‌ರವರಿಗೂ ಗೊತ್ತಿದೆ, ಕಾನೂನು ಸಹ ಚೆನ್ನಾಗಿ ತಿಳಿದುಕೊಂಡಿದ್ದಾರೆ, ಅವರು ನಮ್ಮನ್ನು ಏನೂ ಕೇಳಬೇಕಾಗಿಲ್ಲಾ. ಅವರೇ ಹೈಕೋರ್ಟಿಗೆ ಹೋಗಿ ಈ ತಡೆ ಆಜ್ಞೆ ತಂದಿದ್ದಾರೆ. ಆದಕ್ಕೆ ನಾವೇನೂ ಷಾಮೀಲಾಗಿಲ್ಲ. ತಮಗೆ ಹೇಳಬೇಕಾದರೆ, ಆಡಳಿತ ಮಂಡಲಿಯ

ವರು ನಮ್ಮೊಂದಿಗೆ ಏನಾದರೂ ಸಹಕರಿಸಿದರೆ ಏನಾದರೂ ಮಾಡಬಹುದು, ಅವರೇ ಲಾಯರ್ ಮುಖಾಂತರ ಹೋಗಿ ಕೋರ್ಟಿಗೆ ಹಾಜರಾಗಿದ್ದಾರೆ. ಆ ಮ್ಯಾನೇಜ್‌ಮೆಂಟ್‌ನಲ್ಲಿ ಸಾಕಷ್ಟು ಮಂದಿ ಬಹಳ ಬುದ್ಧಿವಂತರು ಇವ್ವಾರೆ. ಇದರ ಜೊತೆಗೆ ಬೇರೆ ಬೇರೆ ಆಡಳಿತ ಮಂಡಲಿಯವರೂ ಸಹ ಬೇರೆ ಬೇರೆ ಲಾಯರ್ ಇಟ್ಟಿದ್ದಾರೆ. ಹೈಕೋರ್ಟಿನಲ್ಲೂ ಸಹ ಅವರು ವಾದ ಮಾಡುತ್ತಾರೆ. ಈ ಬಗ್ಗೆ ಅವರೆಲ್ಲರೂ ನಮ್ಮೊಂದಿಗೆ ಸಹಕರಿಸಬೇಕು. ಕಾರಣಾಂತರದಿಂದ ಅವರು ಸಮಯ ತೆಗೆದುಕೊಳ್ಳುತ್ತಾರೆ, ಆ ಕಾರಣದಿಂದ ಇದು ಮುಂದುಮುಂದಕ್ಕೆ ಹೋಗುತ್ತಾ ಇದೆ. ತಮಗೆ ಹೇಳಬೇಕಾದರೆ, ನಾವೇನೂ ಪ್ರಯತ್ನ ಮಾಡುತ್ತಾ ಇಲ್ಲ ಅಂತಲ್ಲ, ನಾಲ್ಕಾರು ಸಲ ಪ್ರಯತ್ನ ಮಾಡಿದ್ದೇವೆ, ಈ ವಿಚಾರದಲ್ಲಿ ಸರ್ಕಾರದವರು ಅಡ್ವೋಕೇಟ್ ಜನರಲ್‌ರವರಿಗೆ ಕಾಗದವನ್ನೂ ಬರೆದಿದ್ದಾರೆ, ಅದರ ಬಗ್ಗೆ ಕೌಂಟರ್ ಅಫಿಡವಿಟ್‌ನ್ನೂ ಹಾಕಿದ್ದಾರೆ. ಈ ತಡೆ ಆಜ್ಞೆಯನ್ನು ವಜಾ ಮಾಡಬೇಕು ಎಂದು ಕೌಂಟರ್ ಹಾಕಿದ್ದಾರೆ. ಈ ವಿಚಾರದಲ್ಲಿ ನಿನ್ನೆ ಮೊನ್ನೆಯೂ ಸಹ ಅವರನ್ನು ಕರೆಸಿ ಹೇಳಿದ್ದೇವೆ, ಜಾಗ್ರತೆಯಾಗಿ ಈ ತಡೆ ಆಜ್ಞೆಯನ್ನು ವಜಾ ಮಾಡಿಸಬೇಕು ಎಂದು. ಈ ವಿಚಾರದಲ್ಲಿ ನಮ್ಮ ಪಾಲಿನ ಕರ್ತವ್ಯ ಏನು ಮಾಡಬೇಕೋ ಅದನ್ನು ನಾವು ಮಾಡಿದ್ದೇವೆ. ನಾನೂ ಸಹ ಈ ವಿಚಾರದಲ್ಲಿ ನಾಲ್ಕಾರು ಸಲ ಕಾಗದ ಬರೆದಿದ್ದೇನೆ, ಅಡ್ವೋಕೇಟ್ ಜನರಲ್ ಅವರನ್ನು ಕರೆಸಿ ಮಾತನಾಡಿದ್ದೇನೆ. ಏನೆಂದರೆ ಈ ಶೈಕ್ಷಣಿಕ ವರ್ಷದಿಂದಲಾದರೂ ಇದು ಜಾರಿಗೆ ಬರಬೇಕು, ಹಾಗೆ ಜಾರಿಗೆ ಬರದೇ ಹೋದರೆ. ಈ ತಡೆ ಆಜ್ಞೆ ಹೀಗೆ ಮುಂದುವರೆದರೆ ಇದರಿಂದ ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಅವರ ತಂದೆ ತಾಯಿಗಳಿಗೆ ಬಹಳ ತೊಂದರೆಯಾಗುತ್ತದೆ, ಈ ವಿಚಾರದಲ್ಲಿ ಸರ್ಕಾರದ ಧೋರಣೆ ಏನು ಇದೆ ಅದು ಆದಷ್ಟು ಶೀಘ್ರವಾಗಿ ಜಾರಿಗೆ ಬರಬೇಕು ಅಂತ ಹೇಳಿದ್ದೇವೆ. ನಾವು ಏನೇನು ಹೇಳಬೇಕೋ ಎಲ್ಲವನೂ ಹೇಳಿದ್ದೇವೆ. ನಮ್ಮ ಪ್ರಯತ್ನ ಏನು ಮಾಡಬೇಕೋ ಅವೆಲ್ಲವನ್ನೂ ಮಾಡಿದ್ದೇವೆ, ಆದರೆ ಅವರೇ ಸಹಕರಿಸದೇ ಹೋದರೆ ನಾವೇನು ಮಾಡುವುದಕ್ಕಾಗುತ್ತದೆ ನಾವು ಏನು ಪ್ರಯತ್ನ ಮಾಡಿದರೂ ಅವರು ಬರಲಿಲ್ಲ. ಆದುದರಿಂದ ಮಾನ್ಯ ಸದಸ್ಯರು ನಮ್ಮ ಮೇಲೆ ಏನು ಆಪಾದನೆ ಮಾಡಿದ್ದಾರೆ ನಮ್ಮನ್ನು ಷಾಮಿಲಾಗಿದ್ದಾರೆ ಅಂತ ಏನು ಹೇಳಿದ್ದಾರೆ ಅದು ನಿರಾಧಾರವಾದುದು. ನಾವು ಷಾಮೀಲಾಗಿಲ್ಲ. ಅವರವರೇ ಲಾಯರ್ ಇಟ್ಟುಕೊಂಡು ಸಮಯ ತೆಗೆದುಕೊಂಡರೆ ನಾವೇನು ಮಾಡುವುದಕ್ಕಾಗುತ್ತದೆ. ಇದನ್ನು ಅವರೇ ಮುಂದುವರೆಸಿಕೊಂಡು ಹೋಗುತ್ತಿದ್ದಾರೇ ವಿನಾ ನಾವಲ್ಲ. ಈ ಬಗ್ಗೆ ಮ್ಯಾನೇಜ್‌ಮೆಂಟಿನವರು ಸಹಕರಿಸಿದರೆ ಶೀಘ್ರವಾಗಿ ಇತ್ಯರ್ಥ ಮಾಡಬಹುದು, ಅವರು ಸಹಕರಿಸದೇ ಹೋದರೆ ಬಹಳ ಕಷ್ಟವಾಗುತ್ತದೆ. ಆದರಿಂದ ತಡವಾಗುತ್ತದೆ ವಿನಾ ನಮ್ಮ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ.

SRI S.R. BOMMAI.--I ask the Minister when the Advocate General moved for the vacation of the Stay When the matter came up ಇದರ ಬಗ್ಗೆ ತಾವು ಸ್ಪೆಷಲ್ ಅಟೆನ್‌ಷನ್ ತೆಗೆದುಕೊಂಡು ಮಾಡಬೇಕಾಗಿತ್ತು, ಎಂದು ನನಗೆ ತಿಳಿದುದನ್ನು ಹೇಳುತ್ತೇನೆ. ಇದು ಬಹಳ ಮಹತ್ವದ ವಿಚಾರವಾದುದರಿಂದ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ತಾವು ಮನಸ್ಸು ಮಾಡಿದರೆ ಈ ವಿಚಾರದ ಬಗ್ಗೆ ಒಂದು ವಾರದಲ್ಲಿ ಹೀಯರಿಂಗ್ ಮಾಡಿ ಸ್ಟೇ ವೆಕೇಟ್ ಮಾಡಿಸಬಹುದು, ಮನಸ್ಸು ಮಾಡಿದರೆ ಕಷ್ಟವಲ್ಲ. ಸರ್ಕಾರದ ನೀತಿ ಈ ರೀತಿ ಇದೆ ಎಂದು ಕಟ್ಟುನಿಟ್ಟಾಗಿ ಕೆಲಸ ಮಾಡಿದರೆ ಮಾಡಬಹುದು. ಈಪೊತ್ತಿನ ದಿವಸ ಅವರು ೧೦೯ಕ್ಕೆ ೧೦೦ ಸೀಟುಗಳನ್ನೂ ಕೂಡ ಡೊನೇಷನ್ ಪ್ರಕಾರವೇ ಭರ್ತಿಮಾಡಿದ್ದಾರೆ. ಇದು ಸರ್ಕಾರದ ನೀತಿಯೇ ನಿಮ್ಮ ಆಜ್ಞೆ ಜಾರಿಗೆ ಬರಬೇಕಾಗಿದ್ದರೆ ಈ ತಡೆ ಆಜ್ಞೆಯನ್ನು ಆದಷ್ಟು ಬೇಗ ವೆಕೇಟ್ ಮಾಡಬೇಕಾಗಿದೆ. ನಾನು ಈ ಸಂದರ್ಭದಲ್ಲಿ ತಮ್ಮನ್ನು ಕೇಳುತ್ತೇನೆ ತಾವು ಮನಸ್ಸು ಮಾಡಿದರೆ ಅಡ್ವೋಕೇಟ್ ಜನರಲ್‌ರವರಿಗೆ ತಾವು ಒತ್ತಾಯ ಮಾಡಿ ಇದು ಆದಷ್ಟು ಶೀಘ್ರವಾಗಿ ವೆಕೇಟ್ ಆಗಬೇಕಾಗಿದೆ ನಮ್ಮ ಸರ್ಕಾರದ ನೀತಿ ಹೇಗೆ ಇದೆ, ಅದನ್ನು ಜಾರಿಗೆ ತರುವುದು ಈಗ ಕಷ್ಟ ನೀವು ಸ್ಪೆಷಲ್ ಅಟೆನ್‌ಷನ್ ಕೊಟ್ಟು ಜಾಗ್ರತೆ ಮಾಡಬೇಕು ಎಂದು ಹೈಕೋರ್ಟ್ ಅವಗಾಹನೆಗೆ ತಂದರೆ ಅದರಂತೆ ಹೈಕೋರ್ಟ್‌ನವರು ಜಾಗ್ರತೆ ಕೆಲಸ ಮಾಡುತ್ತಾರೆ. ತಾವು ಈ ಕೆಲಸ ಮಾಡಬೇಕು ಎಂದು ಹೇಳುತ್ತೇನೆ. ಆದರೆ ಹೈಕೋರ್ಟ್‌ನವರು ವಿಳಂಬ ಮಾಡುವುದು ಸರಿಯಲ್ಲ ಎಂದು ಹೇಳಿದ ಮಾತ್ರಕ್ಕೆ ಹೈಕೋರ್ಟ್ ಟೀಕೆ ಮಾಡಬೇಕು ಅಂತ ನಾನು ಮಾಡುತ್ತಾ ಇಲ್ಲ. ಇದು ಮಹತ್ವದ ವಿಚಾರ. ಸರ್ಕಾರ ತನ್ನ ಜವಾಬ್ದಾರಿಯನ್ನು ಅರಿತು, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತೀವ್ರವಾಗಿ ನಿರ್ಣಯ ತೆಗೆದುಕೊಳ್ಳಬೇಕು. ಹಾಗೆಯೇ ಅವರೂ ಸಹ ತೀವ್ರವಾಗಿ ನಿರ್ಣಯ ಕೊಡಬೇಕು. ಈ ಬಗ್ಗೆ ಅನೇಕ ಉದಾಹರಣೆ

ಗಳೂ ಇವೆ. ಅನೇಕ ವಿಚಾರಗಳು ಸುಪ್ರೀಂಕೋರ್ಟಿನಲ್ಲಿದ್ದರೂ ಕೂಡ ಇಂತಹ ಮುಖ್ಯವಾದ ವಿಷಯಗಳನ್ನು ಬೇಗನೆ ತೆಗೆದುಕೊಂಡು ಒಂದು ತಿಂಗಳೊಳಗೆ ತಮ್ಮ ನಿರ್ಣಯವನ್ನು ಕೊಟ್ಟಿರುವ ಉದಾಹರಣೆಯೂ ಇದೆ. ಹಾಗೆಯೇ ಬಾಂಬೆ ಹೈಕೋರ್ಟ್‌ನಲ್ಲೂ ಕೂಡ ಇದನ್ನು ಸ್ಪೆಷಲ್ ಕೇಸ್ ಅಂತ ಮಾಡಿ ಬೇಗನೆ ನಿರ್ಣಯ ಮಾಡಿದ್ದಾರೆ. ಅದೇರೀತಿಯಾಗಿ ತಾವು ಕೂಡ ಇದು ಒಂದು ಸ್ಪೆಷಲ್ ಕೇಸ್ ಅಂತ ಹೈಕೋರ್ಟ್‌ನವರಿಗೆ ಹೇಳಿ ಏತಕ್ಕೆ ಮೂವ್ ಮಾಡಲಿಲ್ಲಾ? ಈ ಬಗ್ಗೆ ಬೇಗಬೇಗನೆ ಹಿಯರಿಂಗ್ ತೆಗೆದುಕೊಳ್ಳುವುದಕ್ಕೆ ಡೇಟ್ಸ್ ಮೂವ್ ಅನ್ನು ನಿಮ್ಮ ಅಡ್ವೋಕೇಟ್ ಜನರಲ್‌ರವರು ಮಾಡಿದ್ದಾರೆಯೇ ಎಂದು ನಾನು ಕೇಳುತ್ತೇನೆ.

ಇನ್ನೊಂದು ವಿಚಾರ ಏನೆಂದರೆ, ತಾವು ಮ್ಯಾನೇಜ್‌ಮೆಂಟ್‌ನವರನ್ನು ಕರೆದು ಏನಾದರೂ ಸಭೆ ನಡೆಸಿದ್ದಿರಾ ಅವರ ಜೊತೆಯಲ್ಲಿ ಚರ್ಚೆ ಮಾಡಿದ್ದಿರಾ ಹೋದಸಲ ಏನೋ ಸ್ವಲ್ಪ ತಡವಾಯಿತು, ಈ ಸಾರಿಯಾದರೂ ಮ್ಯಾನೇಜ್‌ಮೆಂಟ್‌ನವರನ್ನು ಕರೆದು ನಿಮ್ಮ ನೀತಿಯನ್ನು ಒಪ್ಪಿಸಲಿಕ್ಕೆ ಏನಾದರೂ ಪ್ರಯತ್ನ ಮಾಡಿದಿರಾ ಅವರೊಂದಿಗೆ ಸಮಾಲೋಚನೆ ಮಾಡಿದ್ದರೆ ಸರಿಹೋಗುತ್ತಿತ್ತು. ಹೋದ ಸಾರಿ ಮ್ಯಾನೆಜ್‌ಮೆಂಟ್‌ನವರು ನೀವು ಹೇಳುವಷ್ಟರಲ್ಲಿ ಅವರು ಅಡ್ಮಿಷನ್ ಮಾಡಿಕೊಂಡು ಬಿಟ್ಟಿದ್ದರು ಆಗುವುದಿಲ್ಲ ಎಂದರು ಸರಿ. ಆದರೆ ಈ ಸಾರಿಯಾದರೂ ಮ್ಯಾನೇಜ್‌ಮೆಂಟಿನವರನ್ನು ಕರೆದು ನಮ್ಮ ನೀತಿ ಈ ರೀತಿ ಇದೆ ಎಂದು ಏನಾದರೂ ಒಪ್ಪಿಸುವುದಕ್ಕೆ ಪ್ರಯತ್ನ ಮಾಡಿದಿರಾ?

ಶ್ರೀ ಜಿ.ಬಿ. ಶಂಕರರಾವ್.—ಮ್ಯಾನೇಜ್‌ಮೆಂಟ್‌ನವರನ್ನು ಕರೆದು ನಮ್ಮ ನೀತಿ ಒಪ್ಪಿಸುವುದು ಎಂದರೆ ಕಷ್ಟವಾಗುತ್ತದೆ. ಅವರೇ ನಮ್ಮ ವಿರುದ್ಧವಾಗಿ ಹೈಕೋರ್ಟ್‌ಗೆ ಹೋಗಿರುವುದರಿಂದ ಅದು ಆಗುವುದಿಲ್ಲ. ಆದರಲ್ಲಿ ಸುಮಾರು ೨೦-೨೫ ಜನರು ಇದ್ದಾರೆ. ನಾವು ಅವರನ್ನು ಕರೆದು ನೀವು ಒಪ್ಪಿಕೊಳ್ಳಿರಿ ಎಂದರೆ ಅವರು ಒಪ್ಪಿಕೊಳ್ಳುತ್ತಾರೆನು ಅವರು ಅದಕ್ಕೆ ಒಪ್ಪಿಕೊಳ್ಳದೇ ಇರುವುದರಿಂದಲೇನೆ ಹೈಕೋರ್ಟ್‌ಗೆ ಹೋದರು. ಆದುದರಿಂದ ಮತ್ತೆ ನಾವು ಅವರನ್ನು ಕರೆದು ಹೇಳುವುದಕ್ಕೆ ಸಾಧ್ಯವಿಲ್ಲ ಈ ವಿಚಾರ ಈಗ ಹೈಕೋರ್ಟ್‌ನಲ್ಲಿರುವುದರಿಂದ ಈಗ ಅವರನ್ನು ಕರೆದು ಹೇಳಿದರೆ ಅದಕ್ಕೆ ಅವರೂ ಒಪ್ಪುವುದಿಲ್ಲ. ಶ್ರೀ ಎಸ್. ಆರ್ ಬೊಮ್ಮಾಯಿಯವರು ಲಾಯರ್ ಅವರಿಗೂ ಗೊತ್ತಿದೆ. ನಾನೇನೂ ಹೇಳಬೇಕಾಗಿಲ್ಲ. ಈಗ ಅವರೇ ಏನಾದರೂ ನಮ್ಮ ಕಡೆ ಬಂದು ರಾಜಿ ಮಾಡಿಕೊಳ್ಳುತ್ತೇವೆಂದರೆ ಆವಾಗ ಸರ್ಕಾರದವರು ಹೇಳಿದ ಹಾಗೆ ಕೇಳಿರಿ ಎಂದು ಹೇಳಬಹುದು. ಈಗ ಆ ವಿಚಾರ ಹೈಕೋರ್ಟಿನಲ್ಲಿರುವುದರಿಂದ ನಾವಾಗಿ ಅವರನ್ನು ಕರೆದು ಹೇಳುವುದಕ್ಕೆ ಒಪ್ಪುವುದಿಲ್ಲ ಹೇಳುವುದಕ್ಕೆ ಸಾಧ್ಯ ಆಗುವುದಿಲ್ಲ. ಏತಕ್ಕೆಂದರೆ ಅವರಿಗೆ ಕೋರ್ಟಿನ ರಕ್ಷಣೆ ಇರುವುದರಿಂದ ನಾವು ಈಗ ಕರೆಯುವುದಕ್ಕೆ ಸಾಧ್ಯವಿಲ್ಲಾ

ಶ್ರೀ ಎ. ಲಕ್ಷ್ಮೀಸಾಗರ್.—ಈಗ ಅವರ ಮಾತನ್ನು ಕೇಳಿದರೆ ಬಹುಶಃ ಮಾನ್ಯ ಮಂತ್ರಿಯವರು ಯಾರ ಪರವಾಗಿ ವಕಾಲತು ವಹಿಸಿದ್ದಾರೋ ಗೊತ್ತಿಲ್ಲ. ಅವರ ಪರವಾಗಿ ಏನಾದರೂ ವಕಾಲತ್ತು ವಹಿಸಿದ್ದೀರಾ ?

ಶ್ರೀ ಜಿ.ಬಿ. ಶಂಕರರಾವ್.—ನಾನು ಯಾರ ಪರವಾಗಿಯೂ ವಕಾಲತ್ತು ವಹಿಸಿಲ್ಲಾ.

ಶ್ರೀ ಎಸ್.ಆರ್. ಬೊಮ್ಮಾಯಿ.—ಸ್ವಾಮಿ, ನಾನು ತಮ್ಮನ್ನು ಒಂದು ಮಾತು ಕೇಳುತ್ತೇನೆ. ಅದೇನೆಂದರೆ ಅವರಿಗೆ ಪರ್ಮಿಷನ್ ಕೊಟ್ಟವರು ಯಾರು? ಅವರಿಗೆ ರೆಕಗ್ನೈಸ್ ಕೊಟ್ಟವರು ಯಾರು ಯೂನಿವರ್ಸಿಟಿಯವರು ಅಲ್ಲ. ಸರ್ಕಾರದವರೇ ಕೊಟ್ಟಿದ್ದಾರೆ. ಆದುದರಿಂದ ನಿಮಗೆ ಅಧಿಕಾರ ಇದೆ. ಹೀಗಿರುವುದರಿಂದ ಅವರನ್ನು ಕರೆಸಿ ಮಾತನಾಡುವುದಕ್ಕಾಗಲಿ, ಅವರೊಂದಿಗೆ ಆಲೋಚನೆ ಮಾಡುವುದಕ್ಕಾಗಲಿ ನಿಮಗೆ ಅಧಿಕಾರ ಇಲ್ಲವೇ ? ನಾನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳಬೇಕಾಗುತ್ತದೆ. ಅದೇನೆಂದರೆ ಮಾನ್ಯ ಮಂತ್ರಿಯವರು ಈ ಮನೆಯನ್ನು ತಪ್ಪುದಾರಿಗೆ ಎಳೆಯತಕ್ಕಂಥಾ ಪ್ರಯತ್ನ ಮಾಡುತ್ತಿದ್ದಾರೆಂದು. ಮ್ಯಾನೇಜ್‌ಮೆಂಟಿನವರನ್ನು ಕರೆಸಿದ್ದೂ ಮಾತನಾಡಿದ್ದೂ ನನಗೆ ಗೊತ್ತಿದೆ. ಈಗ ಅವರನ್ನು ಏನಾದರೂ ಕರೆಸಿದ್ದೀರಾ ಅಂತ ಕೇಳಿದರೆ ಇಲ್ಲಾ ಅಂತ ಹೇಳಿದರೆ ಇದು ಸರಿಯೇ ?

ಶ್ರೀ ಜಿ.ಬಿ. ಶಂಕರರಾವ್.—ನಾನೇನೂ ಕರೆಸಿರಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೀವು ಕರೆಯದೇ ಇದ್ದಿರಬಹುದು, ಮಾನ್ಯ ಮುಖ್ಯ ಮಂತ್ರಿಗಳೊ ಯಾರೋ ಅವರನ್ನು ಕರೆಸಿದ್ದಾರೆ. ಹೋದ ತಿಂಗಳಿನಲ್ಲಿ ಇಂಜನಿಯರಿಂಗ್ ಕಾಲೇಜು ಮ್ಯಾನೇಜ್‌ಮೆಂಟ್‌ನವರನ್ನು ಕರೆದು ಒಂದು ಸಭೆ ನಡೆಸಿದ್ದಾರೆ.

ಶ್ರೀ ಜಿ.ಬಿ. ಶಂಕರರಾವ್.—ನಾನೇನೂ ಸಭೆ ಕರೆದಿಲ್ಲ. I deny.

ಶ್ರೀ ಎಸ್.ಆರ್. ಬೊಮ್ಮಾಯಿ.—ಸ್ವಾಮಿ, ನಾನು ಈ ಸಂದರ್ಭದಲ್ಲಿ ಒಂದು ಗಂಭೀರವಾದ ಆರೋಪಣೆಯನ್ನು ಮಾಡುತ್ತೇನೆ. ನಾನು ಇದನ್ನು ಅತ್ಯಂತ ಜವಾಬ್ದಾರಿಯಿಂದ ಮಾತನಾಡುತ್ತಿದೇನೆ ಅದು ಏನೆಂದರೆ, ಇಂಜೀನಿಯರಿಂಗ್ ಕಾಲೇಜು ಮ್ಯಾನೇಜ್‌ಮೆಂಟ್‌ನವರನ್ನು ಸರ್ಕಾರದವರು ಕರೆಸಿ ಅವರೊಂದಿಗೆ ಮಾತನಾಡಿ ಚುನಾವಣೆ ಫಂಡ್‌ಗೆ ಎಂದು ೨ ಕೋಟಿ ರೂಪಾಯಿಗಳನ್ನು ಕೊಡತಕ್ಕಂಥಾ ಹೊಂದಾಣಿಕೆಯನ್ನು ಮಾಡಿಕೊಂಡಿದ್ದಾರೆ. ನಾನು ಈ ಮಾತನ್ನು ಅತ್ಯಂತ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. I am making this statement with great responsibility. I know it is a very serious charge. ತಾವು ಸಭೆ ಕರೆದಿಲ್ಲ ಎಂದು ಹೇಳುತ್ತೀರಿ. ಮ್ಯಾನೇಜ್‌ಮೆಂಟಿನ ಎಲ್ಲಾ ಟ್ರೇರ್ಸ್‌ನ್‌ರೂ ಬೆಂಗಳೂರಿಗೆ ಬಂದಿದ್ದರೋ ಇಲ್ಲವೋ ?

SRI S.M. SHEERNALY CHANDRASHEKAR.— I rise to a point of order. ಮಾನ್ಯ ಸದಸ್ಯರು ಮಾತನಾಡುತ್ತಾ ಹೇಳಿದರು, ಚುನಾವಣೆ ಫಂಡ್‌ಗಾಗಿ ಅವರು ೨ ಕೋಟಿ ರೂಪಾಯಿಗಳನ್ನು ಕೊಡುವ ಹಾಗೆ ಒಪ್ಪಂದ ಮಾಡಿಕೊಂಡಿದ್ದಾರೆ ಎಂದು. That has to be proved otherwise it should be expunged. It is a very serious allegation. ಮಾನ್ಯ ಸದಸ್ಯರು ಇದನ್ನು ಪ್ರೂವ್ ಮಾಡದೇ ಹೋದರೆ ಅವರು ಹೇಳತಕ್ಕಂಥಾ ಪದವನ್ನು ಎಕ್ಸ್‌ಪಂಜ್ ಮಾಡಬೇಕೆಂದು ಹೇಳುತ್ತೇನೆ. ಎರಡು ಕೋಟಿ ರೂಪಾಯಿಗಳನ್ನು ಅವರಿಂದ ಚುನಾವಣೆ ಫಂಡ್‌ಗಾಗಿ ಕಲೆಕ್ಟ್ ಮಾಡಿದರು ಅನ್ನುವ ಆಪಾದನೆ ಅವರು ಏನು ಮಾಡಿದ್ದಾರೆ ಅದು ಸರಿಯಲ್ಲ ಎಂದು ಹೇಳುತ್ತೇನೆ.

SRI P. RAMDEV.—Why are you so touch ?

ಶ್ರೀ ಡಿ.ಟಿ. ಮಾಯಣ್ಣ.—ಮಾನ್ಯ ಸದಸ್ಯರು ಈ ಬಗ್ಗೆ ಬಹಳ ಜವಾಬ್ದಾರಿಯಿಂದಲೇ ಮಾತನಾಡುತ್ತಿದ್ದಾರೆ, ಸುಮ್ಮನೆ ಏನೂ ಮಾತನಾಡುತ್ತಾ ಇಲ್ಲ.

ಶ್ರೀ ಎಸ್. ಎಂ. ಶೀರ್‌ನಾಳಿ ಚಂದ್ರಶೇಖರ್.—ನಾನೂ ಸಹ ಜವಾಬ್ದಾರಿಯಿಂದಲೇ ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನು ಜವಾಬ್ದಾರಿಯಿಂದ ಈ ಒಂದು ಆಪಾದನೆಯನ್ನು ಮಾಡುತ್ತಿದ್ದೇನೆ. ಇದು ಬಹಳ ಗಂಭೀರವಾದ ವಿಷಯ.

ಶ್ರೀ ಜಿ.ಬಿ. ಶಂಕರರಾವ್.—ಬಹುಶಃ ತಮ್ಮ ಚುನಾವಣೆ ಫಂಡ್‌ಗಾಗಿ ಏನಾದರೂ ಆ ರೀತಿ ಮಾಡಿದ್ದಾರೋ ಏನೋ ? ಅಲ್ಲಿ ಆಡಳಿತ ಮಂಡಲ್ಲಿಯಲ್ಲಿರುವವರು ನಮ್ಮವರಲ್ಲ. ಎಲ್ಲಾ ನಿಮ್ಮವರೇ, ನೀವೇನಾದರೂ ಮಾಡಿದ್ದಿರೋ ಏನೋ ?

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ಈ ತರಹದ ಆಪಾದನೆಗಳನ್ನು ಮಾಡಬಾರದು ಎಂದು ತಾವೇ ರೂಲಿಂಗ್ ಕೊಟ್ಟಿದ್ದೀರಿ.

ಅಧ್ಯಕ್ಷರು.— ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳಲಿ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸ್ವಾಮಿ, ಇಂಥ ಮಾತುಗಳನ್ನು ಕಡಿತದಿಂದ ತೆಗೆಸದೇ ಹೋದರೆ it will be a remark against a party.

ಶ್ರೀ ಎಸ್.ಆರ್. ಬೊಮ್ಮಾಯಿ.—ಸ್ವಾಮಿ, ಅಲಿಗೇಷನ್ ಮಾಡುವುದಕ್ಕೆ ನನಗೆ ಅಧಿಕಾರ ಇಲ್ಲವೇ ?

SRI H. GANGADHARAN.—A Member has got a right to make an allegation. Let the House decide whether it is proved or not proved. But, he has got a right to make the allegation Where else he can submit, if not in the House ? Can he not make an allegation ? ಇಲ್ಲಿ ನಮಗೆಹೇಳುವ ಅಧಿಕಾರ ಇಲ್ಲವೇ ? ಅದನ್ನು ಪ್ರೂವ್ ಮಾಡುತ್ತೇವೆಂದು ಹೇಳಿದರೂ ತಪ್ಪೆ ?

ಶ್ರೀ ಮೈಕೇಲ್ ಬಿ. ಫರ್ನಾಂಡೀಸ್.—ಎವಿಡೆನ್ಸ್ ಮೇಲೆ ಹೇಳಲಿಕ್ಕೆ ಸಾಧ್ಯವೇ ಹೊರತು ಇಲ್ಲದೆ ಹೇಗೆ ಹೇಳಲಿಕ್ಕೆ ಬರುತ್ತದೆ ?

MR. SPEAKER.—The Minister has also heard it. He has denied it. He is yet to reply. Why are you in a hurry. The Hon. Minister for Education has not replied yet.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ತಾವು ಈ ರೀತಿಯಾಗಿ ಹೇಳುವುದನ್ನು ಆಲೋ ಮಾಡುವುದಾದರೆ, ನಮಗೆ ನಾಳೆ ತಾವು ಆಬ್ಜೆಕ್ಷನ್ ಮಾಡಬಾರದು.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರಾದ ಶೀರನಾಳಿ ಚಂದ್ರಶೇಖರ್ ಹೇಳುವುದನ್ನು ನಾನು ಒಪ್ಪುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ವಿರೋಧಪಕ್ಷದ ನಾಯಕರು ಬಹಳ ಗಂಭೀರವಾದಂಥ ಆರೋಪವನ್ನು ಮ್ಯಾಡಲಿಕ್ಕೆ ಹೊರಟಿದ್ದಾರೆ. ಅವರು ಈ ಆರೋಪವನ್ನು ಯಾವ ಆಧಾರದ ಮೇಲೆ ಮಾಡುತ್ತಾರೋ ಅದನ್ನು ಪ್ರತ್ಯೇಕವಾಗಿ ನೋಡೋಣ. ರೂಲ್ 284ರ ಪ್ರಕಾರ ಇಂಥ ಅಲಿಗೇಷನ್ ಮಾಡುವ ಮೊದಲು ಅವರು ಪ್ರೀವಿಯೆಸ್ ಇಂಟಿಮೇಷನ್ ಕೊಡಬೇಕಾಗುತ್ತದೆ. After all, he does not make it against Vidhana Soudha. It pertains and reflects on the Ministery or the person who is heading. ಆದ್ದರಿಂದ ಅವರು ಅಪಾದನೆಯನ್ನು ಮಾಡಲು he has to intimate here. ಆಧಾರ ರಹಿತವಾಗಿ ಪಾರ್ಟಿ ಫಂಡ್ ಕಲೆಕ್ಟ್ ಮಾಡಲಿಕ್ಕೆ, ಎರಡು ಕೋಟಿ ರೂಪಾಯಿಗಳನ್ನು ಕಲೆಕ್ಟ್ ಮಾಡಲಿಕ್ಕೆ ಎಂದು ಅವರು ಹೇಳಿದ್ದಾರೆ. ಇದು ಏನು ಅರ್ಥ ?

ಅಧ್ಯಕ್ಷರು.—ಮೀಟಿಂಗ್ ಕರೆಯಿಸಿದರು ಎಂದು ಹೇಳಿದರು.

ಶ್ರೀ ಎಂ. ವೀರಪ್ಪ ಮೊಯಿಲಿ —ಎರಡು ಕೋಟಿ ರೂಪಾಯಿಗಳನ್ನು ಪಾರ್ಟಿ ಫಂಡ್‌ಗೆ ತೆಗೆದು ಕೊಳ್ಳುವ ಏರ್ಪಾಡಾಗಿದೆ ಎಂದು ಅವರು ಹೇಳಿದ ಮೇಲೆ it is an allegation which attracts, attention and we can definitely invoke rule 284. It is not against the wall that he is making the allegation. It is the person who is involved. ಇದು ಖಂಡಿತವಾಗಿಯೂ ಈ ಸದನಕ್ಕೆ ಗೌರವ ತರತಕ್ಕದ್ದಲ್ಲ.

SRI G.B. SHANKAR RAO.—What he says is an assumption.

MR. SPEAKER.—If you have got the materials straight away give it.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನು ಶಾಸಕನಾಗಿ ಇಲ್ಲಿ ಅನೇಕ ವರ್ಷಗಳನ್ನು ಕಳೆದಿದ್ದೇನೆ. ಇಂಥ ಆರೋಪಗಳನ್ನು ಮಾಡುವಾಗ, ಮಾಡಬೇಕಾದರೆ ಹೆಚ್ಚು ಜವಾಬ್ದಾರಿಯಿಂದ ಮಾಡಬೇಕು. ಯಾವ ಆಧಾರವೂ ಇಲ್ಲದೇ ಸರ್ಕಾರದ ಮೇಲೆ ಅಪಾದನೆ ಮಾಡತಕ್ಕ ವಿಚಾರಕ್ಕೆ ನಾನು ಎಂದೂ ಹೋಗಿಲ್ಲ. ಯಾವ ಅಪಾದನೆಗಳನ್ನು ಮಾಡಬೇಕಾದರೂ ಸಹ ಆಧಾರ ಇಲ್ಲದೆ, ನಂಬಿಕೆ ಇಲ್ಲದೆ ಎಂದೂ ನಾನು ಮಾಡಿಲ್ಲ. ಮ್ಯಾನೇಜ್‌ಮೆಂಟ್‌ನವರ ಸಭೆ ಈ ವಿಷಯದಲ್ಲಿ ಆಗಿದೆ, ಮ್ಯಾನೇಜ್‌ಮೆಂಟ್ ನವರು ಬೆಂಗಳೂರಿಗೆ ಬಂದಿದ್ದಾರೆ, ಇದರ ಬಗ್ಗೆ ಟಿ.ಎ.ಡಿ.ಎ ಖರ್ಚು ಅವರ ಮ್ಯಾನೇಜ್‌ಮೆಂಟ್‌ನಲ್ಲಿ ಬಿದ್ದಿದೆ.

ಅಧ್ಯಕ್ಷರು.—ಅವರು ಯಾವುದಕ್ಕೋ ಬಂದಿರಬಹುದು. Please come to the point. Let us not go out of the track.

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರದವರೇ ಕರೆಯಿಸಿದ್ದಾರೆ. ಆ ಸಭೆಯಲ್ಲಿ ಮಾನ್ಯ ಮಂತ್ರಿಗಳು ಇದ್ದರೋ ಇಲ್ಲವೋ ಗೊತ್ತಿಲ್ಲ. ಆ ಸಭೆಯಲ್ಲಿ ಪ್ರತಿಯೊಂದು ಮ್ಯಾನೇಜ್‌ಮೆಂಟಿನವರು ಇಂತಿಷ್ಟು ಹಣವನ್ನು ಕಲೆಕ್ಟ್ ಮಾಡಬೇಕು ಎನ್ನುವಂಥ ಒರಲ್ ಇನ್ಸ್‌ಟ್ರಕ್ಷನ್ಸ್ ಸರ್ಕಾರದವರು ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಯಾವ ಸರ್ಕಾರ ? ಎಲ್ಲಿ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಗುಂಡೂರಾಯರ ಸರ್ಕಾರ, ಡೀಟೇಲ್ಸ್ ಬೇಕಾದರೆ ಕೊಡುತ್ತೇ. If you want I will give the details.

SRI G B. SHANKAR RAO.—This story should not go to the records. Let him give in writing. He cannot go on stating a story here. We cannot here it.

ಶ್ರೀ ಎಸ್. ಆರ್. ಬೊಮ್ಮಾಯಿ.—ಪಬ್ಲಿಸಿಟಿ ಸಲುವಾಗಿ ನಾನು ಹೇಳುತ್ತಿಲ್ಲ. ಇದು ರಾಜ್ಯದಲ್ಲಿ ನಡೆಯುತ್ತಿದೆ. ವಿದ್ಯೆಯ ಮಾರಾಟ ನಿಲ್ಲಬೇಕು ಎನ್ನುವ ದೃಷ್ಟಿಯಿಂದ ನಾನು ಇಲ್ಲಿ ಹೇಳುತ್ತಿದ್ದೇನೆ.

SRI M. VEERAPPA MOILY.— Let him give in writing.

MR. SPEAKER.— Confine yourself in respect of the Calling Attention Motion and the policy of the Education Department. Do not go out of the track. If you want to say that, nothing prevents you provided you give a notice of it.

SRI A. LAKSHMISAGAR.— May I make a submission ? Rule 289 does confine itself in its operation to an allegation made against an individual or member.

MR. SPEAKER.— Not we have raised a Calling Attention Motion under 63, in respect of a particular instance namely the policy of the Department. If you want, if you are confident of the materials in your possession you can give a notice of it. Give advance notice to the Government. Let them also prepare. Raise it afterwards. Otherwise ನಾವು ಎಲ್ಲಿಗೆ ಹೋಗುತ್ತೇವೆ ?

SRI A. LAKSHMISAGAR.— Kindly give me an opportunity. Let me make my submission. Kindly lend me your years. The purport of 289 is confined to an allegation made against a Minister or against any other Member of this House. But, when a Member speaks and makes an attack against the policy of the Government this rule has no application . This is my submission. I do not want to elaborate on it. We are making an allegation against the Government represented by the Minister. Give him an opportunity.

MR. SPEAKER.— Do you want to take the Government unawares ?

SRI A. LAKSHMISAGAR.—Calling Attention Notice is given.

MR. SPEAKER. — Why should we have that particular section ? Supposing for argument sake you have come to know certain other things and materials, give a notice of it well in advance. ಇನ್‌ಸಿಡೆಂಟಲ್ ಆಗಿ ಬಂತು ಅದಕ್ಕೆ ನಾನು ಸುಮ್ಮನಾದೆ. If it is the intention of this notice please bring it under Rule 289.

SRI S. R. BOMMAI.— I will take another opportunity and I will give a proper notice and I will do it.

SRI M. VEERAPPA MOILY.— Now, you do not have evidence. If you had evidence you would have intimated. You are going to give evidence

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಅರ್ಥ ಮಂತ್ರಿಗಳು ತಮ್ಮ ಚಾಣಕ್ಯತನವನ್ನು ಬಿಡಲಿ, ನಾನು ಎವಿಡನ್ಸ್ ಕೊಡುತ್ತೇನೆ. With your permission I will place the entire thing on the floor of the House.

MR. SPEAKER — Not now. Please confine yourself to this.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಚಾಲೆಂಜ್ ಕೊಡುತ್ತಿದ್ದಾರೆ, ನಾನೂ ತಯಾರಿದ್ದೇನೆ ಮಾನ್ಯ ಅರ್ಥ ಮಂತ್ರಿಗಳು ಈ ರೀತಿಯಾಗಿ ಚಾಣಕ್ಯರಾಗುವುದಕ್ಕೆ ಆಗುವುದಿಲ್ಲ. ಮಾನ್ಯ ವಿದ್ಯಾಮಂತ್ರಿಗಳು ತಮ್ಮ ನೋಟಿಫಿಕೇಷನ್ ಪ್ರಕಾರ ಕೊಟ್ಟಿರುವ ಸೀಟುಗಳು ೮೫೩೩. ಇಂತಿಂತ ಕಾಲೇಜುಗಳಿಗೆ ಇಂತಿಷ್ಟು ಇನ್‌ಟೇಕ್ ಎಂದು ಹೇಳಿದ್ದಾರೆ. ಇನ್‌ಟೇಕ್‌ಗಿಂತ ಹೆಚ್ಚು ಅಡ್ಮಿಷನ್ಸ್ ಯಾವುದಾದರೂ ಕಾಲೇಜು ಮಾಡಿದ್ದಾರೆಯೇ ? ಮಾಡಿದ್ದರೆ ಅವರು ಎಷ್ಟು ಸಂಖ್ಯೆಯನ್ನು ಮಾಡಿದ್ದಾರೆ. ಇದರಲ್ಲಿ ಸರ್ಕಾರದ ಡಿಸ್ಕ್ರಿಪ್ಷನ್ ಪ್ರಕಾರ ಎಷ್ಟು ಸೀಟುಗಳನ್ನು ಉಪಯೋಗ ಮಾಡಿದ್ದೀರಿ ?

MR. SPEAKER — Suddenly he will not be in possession of all these matter. Give a notice under 312. Say specifically these are the things.

SRI S. R. BOMMAI.— I have written that in my notice I have asked the number of seats notified and admitted. ಇದಕ್ಕಿಂತ ಹೆಚ್ಚು ಅಡ್ಮಿಷನ್ ಮಾಡಿದ್ದಾರೆ.

೧೦–೩೦ ಎ.ಎಂ.

ಶ್ರೀ ಎಸ್. ಆರ್. ಬೊಮ್ಮಾಯಿ.— ನಾವು ಅದನ್ನೆಲ್ಲಾ ನಮ್ಮ ನೋಟೀಸ್‌ನಲ್ಲಿ ಬರೆದಿದ್ದೇವೆ. ಯಾವ್ಯಾವ ಕಾಲೇಜಿನವರು ಎಷ್ಟೆಷ್ಟು ಸೀಟುಗಳಿಗೆ ಅಡ್ಮಿಟ್ ಮಾಡಿಕೊಂಡಿದ್ದಾರೆ ಎಂಬ ಬಗ್ಗೆ ನೋಟಿಫೈ ಮಾಡಿದ್ದಾರೆ. ಅದನ್ನು ಏತಕ್ಕೆ ಮಾಡಿದರು . ಒಂದೊಂದು ಕಾಲೇಜಿನವರು ೨೫೦, ೩೦೦ ಕ್ಕಿಂತ ಹೆಚ್ಚು ಸೀಟುಗಳನ್ನು ತುಂಬಿದ್ದಾರೆ. ಕೆಲವು ಕಾಲೇಜಿನವರು ಏತಕ್ಕೆ ಹೆಚ್ಚು ಸೀಟುಗಳನ್ನು ತುಂಬಿದ್ದಾರೆ ? ಅವರಿಗೆ ಯಾರು ಪರವಾನಗಿಯನ್ನು ಕೊಟ್ಟರು ? ಇದಕ್ಕೆ ಕಾರಣ ಏನು ?

ಶ್ರೀ ಜಿ. ಬಿ. ಶಂಕರರಾವ್.— ಸರ್ಕಾರಿ ಆಜ್ಞೆಯ ಪ್ರಕಾರ ಇಂತಿಷ್ಟೇ ವಿದ್ಯಾರ್ಥಿಗಳಿಗೆ ಸೀಟುಗಳನ್ನು ಕೊಡಬೇಕೆಂದು ನಾವು ಆಜ್ಞೆಯಲ್ಲಿ ನಮೂದು ಮಾಡಿದ್ದೇವೆ. ಅದಕ್ಕಿಂತ ಹೆಚ್ಚಿನ ರೀತಿಯಲ್ಲಿ ಅವರು ಪ್ರವೇಶಾವಕಾಶಗಳನ್ನು ಕೊಟ್ಟಿದ್ದರೆ ಅಂತಹವರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಆ ಬಗ್ಗೆ ಮಾನ್ಯ ಸದಸ್ಯರಿಗೆ ಆತಂಕ ಬೇಡ.

ಶ್ರೀ ಎಸ್. ಆರ್, ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ, ಆ ಕಾಲೇಜುಗಳಲ್ಲಿ ಅಡಿಷನಲ್ ಸೀಟ್ಸ್ ಕೊಟ್ಟಿದ್ದಾರೆ. ಆ ಬಗ್ಗೆ ನಾವು ಪ್ರಶ್ನೆ ಕೇಳಿದ್ದೇವೆ.

ಶ್ರೀ ಜಿ. ಬಿ. ಶಂಕರರಾವ್.— ಮಾನ್ಯ ಅಧ್ಯಕ್ಷರೇ, ಇರತಕ್ಕಂಥ ಸರ್ಕಾರಿ ಆಜ್ಞೆಯ ಪ್ರಕಾರ ಇಂತಿಷ್ಟೇ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಕೊಡಬೇಕೆಂದು ನಾವು ಹೇಳಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಪ್ರಕಾರ ಅಡಿಷನಲ್ ಸೀಟ್ಸನ್ನು ಅವರು ಕೊಟ್ಟಿದ್ದರೆ ಅದು ತಪ್ಪಾಗುತ್ತದೆ. ಅಡಿಷನಲ್ ಸೀಟ್ಸ್ ಕೊಡಿ ಎಂದು ನಾವು ಆ ಕಾಲೇಜುಗಳವರಿಗೆ ಹೇಳಿಲ್ಲ. ನಾವು ಅವರಿಗೆ ಅನುಮತಿಯನ್ನು ಕೊಟ್ಟಿಲ್ಲ. ಆ ಬಗ್ಗೆ ಅನುಮತಿಯನ್ನು ನಾವು ಕೊಡುವುದೂ ಇಲ್ಲ. ನಮ್ಮ ಅನುಮತಿ ಇಲ್ಲದೇ ಯಾರು ಹೆಚ್ಚಿಗೆ ಸೀಟುಗಳನ್ನು ತುಂಬಿರುತ್ತಾರೆ ಅಂತಹವರ ಬಗ್ಗೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್ ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ, ಈ ಅಡಿಷನಲ್ ಸೀಟುಗಳನ್ನು ತುಂಬುವುದಕ್ಕಾಗಿ ಸರ್ಕಾರದವರು ಕೆಲವು ಕಾಲೇಜುಗಳಿಗೆ ಅನುಮತಿಯನ್ನು ಕೊಟ್ಟಿದ್ದಾರೆ. In certain cases the Government has given Specific permission. ಆದರೆ ಕೆಲವು ಕಾಲೇಜುಗಳಿಗೆ ಅನುಮತಿ ಕೊಟ್ಟಿಲ್ಲ. ಅವರಿಗೆ ಅನುಮತಿಯನ್ನು ಕೊಡದೇ ಅವರು ಅಡಿಷನಲ್ ಸೀಟುಗಳನ್ನು

ತುಂಬಿದ್ದಾರೆ. ಅವರ ಮೇಲೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಈ ಬಗ್ಗೆ ಅವರು ನೋಟಿಫಿಕೇಷನ್ ಮಾಡಿದ್ದಾರೆ. ಸರ್ಕಾರದವರು ಹೆಚ್ಚು ಸೀಟುಗಳನ್ನು ತೆಗೆದುಕೊಳ್ಳುವುದಕ್ಕೆ ಅನುಮತಿಯನ್ನು ಕೊಟ್ಟಿದ್ದಾರೆ, ಇದಕ್ಕೆ ಕಾರಣವೇನು

ಶ್ರೀ ಮೈಕೇಲ್ ಬಿ. ಫರ್ನಾಂಡಿಸ್,— ಗೌರ್ನಮೆಂಟ್ ಕಾಲೇಜುಗಳಲ್ಲಿ ಹೆಚ್ಚಿನ ಸೀಟು ತೆಗೆದುಕೊಳ್ಳುವುದಕ್ಕೆ ಅನುಮತಿಯನ್ನು ಕೊಟ್ಟಿದ್ದಾರೆ.

ಶ್ರೀ ಜಿ. ಬಿ. ಶಂಕರರಾವ್.— ಮಾನ್ಯ ಅಧ್ಯಕ್ಷರೇ, ಯಾವುದಾದರೂ ಶಿಕ್ಷಣ ಸಂಸ್ಥೆಗಳಿಗೆ ಹೆಚ್ಚಿನ ಪ್ರವೇಶಾವಕಾಶಕ್ಕೆ ಅನುಮತಿ ಕೊಡಬೇಕಾಗಿದ್ದರೆ ವಿಶ್ವವಿದ್ಯಾನಿಲಯದವರು ಆ ಬಗ್ಗೆ ಶಿಫಾರಸ್ಸು ಮಾಡಿ ಕಳಿಸಬೇಕು. ನಾವಂತೂ ಕೆಲವು ಕಾಲೇಜುಗಳಿಗೆ ಯೂನಿವರ್ಸಿಟಿ ರೆಕಮೆಂಡೇಷನ್ ಮೇರೆಗೆ ಹೊಸ ಕೋರ್ಸ್‌ಗಳಿಗೆ ಅನುಮತಿಯನ್ನು ಕೊಟ್ಟಿದ್ದೇವೆ. ಅಲ್ಲಿ ಅವರು ಹೆಚ್ಚಿಗೆ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಕೊಟ್ಟಿದ್ದರೂ ಅದನ್ನು ನಾವು ಒಪ್ಪಿಲ್ಲ. ಎ.ಐ.ಸಿ.ಟಿ.ಯವರು ಹೊಸ ಹೊಸ ಕೋರ್ಸ್‌ಗಳಿಗೆ ಪ್ರವೇಶಗಳನ್ನು ಕೊಡಿ ಎಂದು ಹೇಳಿದ ಮೇಲೆ, ಅವರು ಕೆಲವೊಂದು ಕೋರ್ಸ್‌ಗಳನ್ನು ಶಿಫಾರಸ್ಸು ಮಾಡಿದ ಮೇಲೆ ಕೆಲವೊಂದು ಕಾಲೇಜುಗಳವರಿಗೆ ನಾವು ಸರ್ಕಾರಿ ಆಜ್ಞೆಯ ಪ್ರಕಾರ ಅನುಮತಿ ಕೊಟ್ಟಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ, ಅವರು ಮೊದಲು ಈ ಸರ್ಕಾರಿ ಆಜ್ಞೆಗೆ ವಿರುದ್ಧ ನಾವು ಅನುಮತಿ ಕೊಟ್ಟಿಲ್ಲ ಎಂದು ಹೇಳಿದರಂ. ಈಗ ಕೆಲವು ಕಾಲೇಜುಗಳಿಗೆ ಅನುಮತಿ ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು.— ಹೊಸ ಕೋರ್ಸ್‌ಗಳಿಗೆ ನಾವು ಅನುಮತಿ ಕೊಟ್ಟಿದ್ದೇವೆ ಎಂದು ಅವರು ಹೇಳಿದರು.

ಶ್ರೀ ಜಿ. ಬಿ. ಶಂಕರರಾವ್.— ಮಾನ್ಯ ಅಧ್ಯಕ್ಷರೇ, ಹೊಸ ಕೋರ್ಸ್‌ಗಳು ಬೇರೆ, ಇನ್‌ಟೇಕ್ ಬೇರೆ. ನಮ್ಮ ಆಜ್ಞೆಯನ್ನು ಮೀರಿ ಹೆಚ್ಚು ಸೀಟುಗಳನ್ನು ತೆಗೆದುಕೊಂಡಿದ್ದರೆ ಅಂತಹವರ ಬಗ್ಗೆ ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ, ಅಂತಹವರಿಗೆ ನಾವು ಅನುಮತಿಯನ್ನು ಕೊಟ್ಟಿಲ್ಲ. ಹೊಸ ಕೋರ್ಸ್‌ಗಳಿಗಾಗಿ ಯೂನಿವರ್ಸಿಟಿ ಶಿಪಾರಸ್ಸಿನ ಮೇರೆಗೆ ಕೆಲವು ಕಾಲೇಜುಗಳಿಗೆ ನಾವು ಪರ್ಮಿಷನ್ ಕೊಟ್ಟಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಹೊಸ ಕೋರ್ಸ್‌ಗಳು ಬೇರೆ, ಹೊಸ ಕೋರ್ಸಿಗೆ ಅಲ್ಲ ನೀವು ಪರ್ಮಿಷನ್ ಕೊಟ್ಟಿರುವುದು. ಇದ್ದಂತಹ ಸೀಟುಗಳನ್ನೇ ಹೆಚ್ಚಿಗೆ ಮಾಡಿ ಅದಕ್ಕೆ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವುದಕ್ಕೆ ನೀವು ಪರ್ಮಿಷನ್ ಕೊಟ್ಟಿದ್ದೀರಿ. ಇನ್‌ಟೇಕ್ ಏನಿದೆ. ಅದಕ್ಕಿಂತ ಹೆಚ್ಚು ತೆಗೆದುಕೊಳ್ಳುವುದಕ್ಕೆ ಆ ಬಗ್ಗೆ ಯಾರದೋ ಒತ್ತಡಕ್ಕೆ ಬಿದ್ದು ಪರ್ಮಿಷನ್ ಕೊಟ್ಟಿದ್ದೀರಿ. ಪ್ರೈವೇಟ್ ಕಾಲೇಜುಗಳವರಿಗೆ ೧೦೦ ಅಥವಾ ೧೫೦ ಸೀಟುಗಳನ್ನು ಹೆಚ್ಚು ಕೊಟ್ಟರೂ ಕೂಡ ಅವರು ಕ್ಯಾಪಿಟೇಷನ್ ಫೀ ತೆಗೆದುಕೊಳ್ಳುತ್ತಾರೆ. ಇದರಲ್ಲಿ ದುಡ್ಡಿನ ವ್ಯವಹಾರ ಇದೆ. ನಮ್ಮ ಹುಬ್ಬಳ್ಳಿ ಕಾಲೇಜನ್ನು ತೆಗೆದುಕೊಂಡರೆ ಅಲ್ಲಿಗೆ ಔಟ್‌ಸೈಡ್ ಸ್ಟೇಟ್‌ನಿಂದ ೧೬ ಜನ ಬಂದಿದ್ದಾರೆ. ಔಟ್ ಆಫ್ ೬೬ ಅಷ್ಟು ಜನಕ್ಕೆ ಅವಕಾಶ ಕೊಟ್ಟಿದ್ದಾರೆ. ಪ್ರತಿಯೊಂದು ಕಾಲೇಜಿನಲ್ಲಿ ಕೂಡ ಹೊರಗಿನಿಂದ ಬಂದಂತಹ ವಿದ್ಯಾರ್ಥಿಗಳು ಇದ್ದಾರೆ. ಹೋದ ವರ್ಷ ೧೯೮೦–೮೧ರಲ್ಲಿ ಆಗಿರತಕ್ಕಂಥಾದ್ದನ್ನು ನಾನು ಹೇಳುತ್ತಿದ್ದೇನೆ. ಬಹುತೇಕ ಕಾಲೇಜುಗಳಲ್ಲಿ, ಪ್ರೈವೇಟ್ ಏಡೆಡ್ ಕಾಲೇಜುಗಳಲ್ಲಿ ೫೦ ಪರ್ಸೆಂಟ್‌ಗಿಂತ ಜಾಸ್ತಿ ಕರ್ನಾಟಕದಿಂದ ಹೊರಗಡೆ ಇರತಕ್ಕಂಥವರೇ ಇದ್ದಾರೆ. ಇದರಲ್ಲಿ ಹೆಚ್ಚು ಡೊನೇಷನ್ ತೆಗೆದುಕೊಳ್ಳತಕ್ಕಂಥ ವ್ಯವಹಾರ ಇದೆ. ಹೋದಸಲ ೩೦ ಸಾವಿರ ಇತ್ತು, ಈಗ ಅದು ೫೦ ಸಾವಿರ ಆಗಿದೆ. ಆ ವಿಚಾರ ಬೇರೆ. ಅನೇಕ ಸಲ ಈ ಬಗ್ಗೆ ನಾವು ಹೇಳಿದ್ದೇವೆ ಇದರಲ್ಲಿ ಹೆಚ್ಚಿನ ಸೀಟುಗಳಿಗೆ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕೊಟ್ಟಿರತಕ್ಕಂಥ ಬಗ್ಗೆ ಸರ್ಕಾರದ ಕೈವಾಡವಿದೆ. ಕೆಲವು ಕಾಲೇಜುಗಳಿಗೆ ಸರ್ಕಾರದವರು ಪರ್ಮಿಷನ್ ಕೊಟ್ಟಿದ್ದಾರೆ ಕೆಲವು ಕಾಲೇಜುಗಳಿಗೆ ಕೊಟ್ಟಿಲ್ಲ. ಇದರಲ್ಲಿ ಅವರಿಗೆ ಪರ್ಮಿಷನ್ ಕೊಡಬೇಕಾದರೆ ಏನು ಕಾರಣ ? ಇದರಲ್ಲಿ ಹಣದ ವ್ಯವಹಾರವಿದೆ. ಈ ಬಗ್ಗೆ ನೋಟೀಸ್ ಕೊಟ್ಟು ಹೇಳಬೇಕು ಎಂದರೆ ನೋಟೀಸ್ ಕೊಟ್ಟೇ ಹೇಳುತ್ತೇನೆ.

ಶ್ರೀ ಜಿ. ಬಿ. ಶಂಕರರಾವ್.— ಸ್ವಾಮಿ, ನಾನು ಆಗಲೇ ಹೇಳಿದಂತೆ ವಿಶ್ವವಿದ್ಯಾನಿಲಯದವರು ಶಿಫಾರಸ್ಸು ಮಾಡಿದಂತಹ ಕೋರ್ಸ್‌ಗಳಿಗೆ ಮಾತ್ರ ನಾವು ಅನುಮತಿಯನ್ನು ಕೊಟ್ಟಿದ್ದೇವೆ. ಅವರು ಹೊರಗಡೆಯಿಂದ ಬಂದಿರತಕ್ಕಂಥ ವಿದ್ಯಾರ್ಥಿಗಳನ್ನೂ ತೆಗೆದುಕೊಂಡಿರಬಹುದು, ನಾನು ಇಲ್ಲ ಎಂದು

ಹೇಳುವುದಿಲ್ಲ. ಆ ಬಗ್ಗೆ ಇನ್‌ಟೇಕ್ ಏನಿದೆ ಅದರ ಮೇಲೆ ಅವರು ತೆಗೆದುಕೊಂಡಿಲ್ಲ. ನಮಗೆ ವಿಶ್ವವಿದ್ಯಾನಿಲಯದವರ ಶಿಫಾರಸ್ಸು ಇಲ್ಲದೇ ನಾವು ಯಾರಿಗೂ ಪರ್ಮಿಷನ್ ಕೊಟ್ಟಿಲ್ಲ. ನಮ್ಮ ಆಜ್ಞೆಯನ್ನು ಮೀರಿ ಹೆಚ್ಚುವರಿ ಸೀಟುಗಳನ್ನು ವಿದ್ಯಾರ್ಥಿಗಳನ್ನು ಅಡ್ಮಿಟ್ ಮಾಡಿಕೊಂಡಿರತಕ್ಕಂಥ ಕಾಲೇಜುಗಳವರಿಗೆ ನಾವು ಅನುಮತಿಯನ್ನು ಕೊಟ್ಟಿಲ್ಲ ಎನ್ನುವ ಮಾತನ್ನು ನಾನು ಸ್ಪಷ್ಟಪಡಿಸುತ್ತಿದ್ದೇನೆ.

ಶ್ರೀ ಎಸ್ ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ, ಸರ್ಕಾರದವರಿಂ ವಿಶ್ವವಿದ್ಯಾನಿಲಯದಿಂದ ಅನುಮತಿಯನ್ನು ತರಿಸಿಕೊಂಡು ಆ ಕಾಲೇಜುಗಳ ಮ್ಯಾನೇಜ್‌ಮೆಂಟ್‌ನವರಿಗೆ ಹೆಚ್ಚು ಸೀಟುಗಳನ್ನು ತೆಗೆದುಕೊಳ್ಳುವುದಕ್ಕೆ ಒಪ್ಪಿಗೆಯನು ಕೊಟ್ಟಿದ್ದಾರೆ. ಕೆಲವು ಕಾಲೇಜುಗಳಲ್ಲಿ ಮಾಡಿದ್ದಾರೆ. ಮತ್ತೆ ಕೆಲವು ಕಾಲೇಜುಗಳಲ್ಲಿ ಮಾಡಿಲ್ಲ. ಇದರ ಲಾಭವೆಲ್ಲಾ ಹೊರಗಿನಿಂದ ಬಂದಿರತಕ್ಕಂಥ ವಿದ್ಯಾರ್ಥಿಗಳಿಗೆ ಹೋಗಿದೆ. ಇದರಲ್ಲಿ ಹಣದ ದೊಡ್ಡ ವ್ಯವಹಾರವೇ ನಡೆದಿದೆ. ಈ ಬಗ್ಗೆ ಹೈಕೋರ್ಟಿನಲ್ಲಿ ಇರತಕ್ಕಂಥ ಸ್ಟೇಯನ್ನು ಇನ್ನು ಎಷ್ಟು ದಿವಸದಲ್ಲಿ ವೆಕೇಟ್ ಮಾಡಿಸುತ್ತಾರೆ ಎಂಬುದನ್ನು ಅವರು ಹೇಳಬೇಕು. ಅಲ್ಲಿ ಅಡ್ಮಿಷನ್ಸ್ ಸ್ಟಾರ್ಟ್ ಆಗುವುದರೊಳಗೆ ವೆಕೇಟ್ ಮಾಡಿಸುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಜಿ. ಬಿ. ಶಂಕರರಾವ್.— ಮಾನ್ಯ ಅಧ್ಯಕ್ಷರೇ, ಅವರು ಈ ವಿಚಾರದಲ್ಲಿ ಬಹಳ ಉತ್ಪ್ರೇಕ್ಷೆ ಮಾಡಿ ಹೇಳುತ್ತಿದ್ದಾರೆ. ಈ ಬಗ್ಗೆ I should not say recklessly.

ಅಧ್ಯಕ್ಷರು.— ಅದು ಹಾಗೆ ಇರಲಿ ಎಂದರೆ ಅದು ಹಾಗೆಯೇ ಹೋಗುತ್ತಾ ಇರುತ್ತದೆ. ಅವಸರ ಪಡುವುದು ಬೇಡ. ಯೋಚನೆ ಮಾಡಿ ಹೇಳಿ.

ಶ್ರೀ ಜಿ ಬಿ. ಶಂಕರರಾವ್.— ಮಾನ್ಯ ಬೊಮ್ಮಾಯಿಯವರು ಹೇಳಿರತಕ್ಕಂಥಾದ್ದರಲ್ಲಿ ಉತ್ಪ್ರೇಕ್ಷೆ ಇದೆಯೆಂದು ನಾನು ಆಗಲೇ ಹೇಳಿದ್ದೇನೆ. ಅವರು ಹೇಳಿರತಕ್ಕಂಥದ್ದು ಸತ್ಯಕ್ಕೆ ದೂರವಾದುದು, ಅವರಿಗೆ ಪ್ರಚಾರ ಬೇಕಾಗಿದೆ, ಅದಕ್ಕೋಸ್ಕರ ಹೇಳುತ್ತಿದ್ದಾರೆ, ಅದನ್ನು ಇಲ್ಲ ಎಂದು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು.— ಮಾನ್ಯ ಸದಸ್ಯರು ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಸರ್ಕಾರದವರು ಅವರನ್ನು ಮೀಟಿಂಗ್ ಕರೆದಿದ್ದರು ಎಂದು ಹೇಳಿದ್ದಾರೆ. If you want to reply for it, you reply. otherwise it will be there in the record.

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಅಧ್ಯಕ್ಷರೇ, ನಾವು ಸಭೆಯನ್ನು ಕರೆದಿಲ್ಲ, ಮಾನ್ಯ ಸದಸ್ಯರು ಈ ಬಗ್ಗೆ ಊಹೆ ಮಾಡಿಕೊಂಡು ಹೇಳುತ್ತಿದ್ದಾರೆ. ಚುನಾವಣೆಯ ಸಲುವಾಗಿ ಇಷ್ಟು ಹಣವನ್ನು ವಸೂಲು ಮಾಡಬೇಕು ಎಂದು ಹೇಳಿ ನಿರ್ಣಯ ತೆಗೆದುಕೊಂಡು ಆ ರೀತಿ ಮ್ಯಾನೇಜ್‌ಮೆಂಟ್ ಮೆಂಟ್‌ನವರಿಗೆ ಹೇಳಿದ್ದಾರೆ ಎಂದು ಶ್ರೀ ಬೊಮ್ಮಾಯಿಯವರು ಹೇಳಿದರು. ನಾವು ಮೀಟಿಂಗ್ ಕರೆದಿಲ್ಲ. ಅದು ನಿಜವೂ ಅಲ್ಲ, ನಾವು ಮ್ಯಾನೇಜ್‌ಮೆಂಟಿನವರನ್ನು ಹಣವನ್ನೂ ಕೇಳಿಲ್ಲ. ಈ ವಿಚಾರ ಮಾನ್ಯ ಸದಸ್ಯರಿಗೂ ಗೊತ್ತಿರಬೇಕು. ಏಕೆಂದರೆ ಮಾನ್ಯ ಸದಸ್ಯರಿಗೆ ಗೊತ್ತಿರತಕ್ಕಂಥ ಮೆಂಬರೂ ಇದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಎಲ್ಲಾ ನಿಮಗೇ ಗೊತ್ತಿರುವುದು.

ಶ್ರೀ ಜಿ ಬಿ. ಶಂಕರರಾವ್.—ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದೆಲ್ಲಾ ಆಧಾರ ರಹಿತವಾದದು ನಾವು ಮೀಟಿಂಗ್ ಕರೆದಿಲ್ಲ. ಅವರು ಮೀಟಿಂಗ್ ಕರೆದಿರಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಮ್ಮ ಕಡೆ ಆ ಸೀಟುಗಳು ಇಲ್ಲ.

ಶ್ರೀ ಜಿ. ಬಿ. ಶಂಕರರಾವ್.—ಅವರೂ ನಾವು ಒಂದೇ ಕಡೆ ಹುಟ್ಟಿ ಬೆಳೆದಿರುವುದು. ಅದನ್ನೆಲ್ಲಾ ಅವರು ಹೇಳಬಾರದು.

ಶ್ರೀ ಬೊಮ್ಮಾಯಿ.—ಹಾಗಾದರೆ ನನ್ನ ಸಾರ್ವಜನಿಕ ಜೀವನದ ಬಗ್ಗೆ ನಿಮಗೆ ಗೊತ್ತಿದೆ. ಏನು ಹೇಳುತ್ತೀರೋ ಹೇಳಿ.

ಶ್ರೀ ಜಿ. ಬಿ. ಶಂಕರರಾವ್.—ಸಂದರ್ಭ ಬರಲಿ ಅದನ್ನು ನಾನು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಸಾರ್ವಜನಿಕ ಜೀವನದಲ್ಲಿ ನಮಗೆ ಕಷ್ಟ ಏನೂ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ನಾವು ಹಣ ವಸೂಲು ಮಾಡಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ಮೆಡಿಕಲ್ ಕಾಲೇಜ್‌ಗಳಿಗೆ ಸೀಟ್ ಕೊಡುವ ಅಧಿಕಾರ ಅವರ ಕೈಯಲ್ಲಿ ಇದೆ. ಆ ಒಂದು ಅಧಿಕಾರ ನಮ್ಮ ಕೈಯಲ್ಲಿ ಇಲ್ಲ. ಆದ್ದರಿಂದ ಅವರು ಬೇಕಾದರೆ ಹಣ ಮಾಡಬಹುದು. ಇದರಿಂದ ನಮಗೇನು ಪ್ರಯೋಜನವಾಗುವುದಿಲ್ಲ.

ಶ್ರೀ ಜಿ. ಬಿ. ಶಂಕರ್‌ರಾವ್.—ನಾವು ಅಧಿಕಾರದಲ್ಲಿದ್ದುಕೊಂಡು ಒಳ್ಳೆಯ ಕೆಲಸವನ್ನು ಮಾಡುತ್ತೇವೆ. ಆದರೆ ಈಗ ಹಣ ಬೇಕಾಗಿರುವುದು ನಿಮಗೆ, ಕಾರಣವೇನೆಂದರೆ, ಚುನಾವಣೆಗೆ ಹೋಗ ಬೇಕಾದರೆ ಹಣ ಬೇಕಾಗುತ್ತದೆ. ಜನರು ನಮಗೆ ಮತವನ್ನು ಕಳೆದ ಚುನಾವಣೆಯಲ್ಲಿ ಪ್ರೀತಿಯಿಂದ ಕೊಟ್ಟಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಚುನಾವಣೆಗೆ ಹೋದರೆ ಜನರು ನಮಗೆ ಒಳ್ಳೆಯ ಸ್ವಾಗತ ಕೋರಿ ಮತ ಕೊಡುತ್ತಾರೆ.

ಶ್ರೀ ಮೈಕೇಲ್ ಬಿ ಫರ್ನಾಂಡೀಸ್.—ಮಾನ್ಯ ಮಂತ್ರಿಗಳು ಈ ಕಡೆ ಇದ್ದಾಗ ಚೆನ್ನಾಗಿದ್ದರು. ಆ ಕಡೆ ಹೋಗಿ ಈ ರೀತಿ ಆಗಿದೆ.

ಶ್ರೀ ಜಿ. ಬಿ. ಶಂಕರರಾವ್.—ತಾವು ನನ್ನನ್ನು ಕೈಬಿಟ್ಟು ತಮ್ಮ ಪರಿಸ್ಥಿತಿ ಈಗ ಅಧೋಗತಿಗೆ ಇಳಿದಿದೆ. ನನ್ನನ್ನು ಗಂರುವೇ ಎಂದು ಕರೆಯುತ್ತಿದ್ದರು.

ಶ್ರೀ ಪಿ. ರಾಮ್‌ದೇವ್.—ಮಾನ್ಯ ಮಂತ್ರಿಗಳ ಕೈಯಲ್ಲಿ ಕಾಲೇಜುಗಳಿಗೆ ಅಫಿಲಿಯೇಷನ್ ಕೊಡುವುದನ್ನು ಅಧಿಕಾರ ಇಟ್ಟುಕೊಂಡಿದ್ದಾರೆ.

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ನಾವು ಯಾವ ಸಭೆಯನ್ನು ಸಹ ಕರೆದಿಲ್ಲ. ಆ ರೀತಿಯಾಗಿ ಕರೆಯುವುದಕ್ಕೂ ಸಹ ಆಗುವುದಿಲ್ಲ. ಆ ವಿಷಯವೇ ನನಗೆ ಗೊತ್ತಿಲ್ಲ. ಇದನ್ನು ಮಾನ್ಯ ಸದಸ್ಯರು ಕಲ್ಪನೆ ಮಾಡಿಕೊಂಡು ಹೇಳುತ್ತಿದ್ದಾರೆ. ಇದು ಸತ್ಯಕ್ಕೆ ದೂರವಾದ ಸಂಗತಿ. ಕೆಲವು ಕಾಲೇಜುಗಳಿಗೆ ಸ್ಪೆಷಲ್ ಕೋರ್ಸ್‌ಗಳಿಗೆ ಮಾತ್ರ ನಾವು ಪರ್ಮಿಷನ್ ಕೊಟ್ಟಿದ್ದೇವೆ. ಅದನ್ನು ಬಿಟ್ಟರೆ ಸರ್ಕಾರ ಬೇರೆ ಯಾವುದಕ್ಕೂ ಸಹ ಅನುಮತಿ ಕೊಟ್ಟಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಹೈಕೋರ್ಟಿನಲ್ಲಿರುವ ತಡೆಯಾಜ್ಞೆಯನ್ನು ವೇಕೇಟ್ ಮಾಡಿಸಿ ಆದಷ್ಟು ಜಾಗ್ರತೆ ಜಾರಿಗೆ ಕೊಡುವುದಕ್ಕೆ ಅವರು ಪ್ರಯತ್ನ ಮಾಡುತ್ತಾರೆಯೇ?

SRI G B. SHANKARA RAO.—I will put all my efforts to see that the stay is vacated.

(ii) Re.—Hardship caused to the students belonging to special group in admission to School and Colleges.

SRI SHEERNALY CHANDRASEKHAR— Sir, I call the attention of the Minister for Education about the hardship caused to the students belonging to special group in admission to schools and colleges and for the award of scholarships by insisting that the income limit is Rs. 3,800 though the income limit has been Raised to Rs.6,000

SRI G. B. SHANKARA RAO.—Sir, I wish to make the following statement.

The income limit for people to be categorised as Members of the Special Group is Rs. 4,800 per year and not Rs. 3,800 as mentioned in the Calling Attention notice. No decision has been taken to raise the income limit to Rs. 6,000 per year. Members of the Special